**<u>ದಿಃ15.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ-</u>**ಪ್ರತಿವಾದಿ ಪರ ಶ್ರೀ.**D.D.B.,** ವಕೀಲರಿಂದಃ**-**

ನಾನು ಬಿ ಎ ಪದವಿದರ ಇರುತ್ತೇನೆ . ನಾನು ಗೃಹಿಣಿ ಇರುತ್ತೇನೆ . ನಾನು ಬಿ ಕಲ್ಪನಹಳ್ಳಿ , ದಾವಣಗೆರೆ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ವಾಸವಿರುತ್ತೇನೆ . ನನ್ನ ಮದುವೆಯು ದಿಃ 21.12.2011 ರಲ್ಲಿ ನಡೆದಿರುತ್ತದೆ . ಅಲ್ಲಿಂದ ಇಲ್ಲಿಯವರೆಗೂ ಸಹ ಗಂಡನ ಮನೆಯಲ್ಲಿ ವಾಸವಿರುತ್ತೇನೆ ಎಂದರೆ ಸಾಕ್ಷಿ ಸನ್ 2014 ರಿಂದ ವಾಸವಿರುತ್ತೇನೆ ಎಂದು ಹೇಳುತ್ತಾರೆ . ನಾನು ಈಗ ಗಂಡನ ಮನೆ ಬಿ ಕಲ್ಪನಹಳ್ಳಿಯಲ್ಲಿ ವಾಸವಿರುತ್ತೇನೆ ಎಂದರೆ ಸರಿ. ತಿಪ್ಪೇರುದ್ರಪ್ಪ ರವರ ತಂದೆ ಪಟೇಲ್ ಭದ್ರಪ್ಪ ಇರುತ್ತದೆ . ತಿಪ್ಪೇರುದ್ರಪ್ಪ ಅವರಿಗೆ ಬಂದಿರುವ ಆಸ್ತಿಗಳು ಅವರ ತಂದೆ ಕಡೆಯಿಂದ ಬಂದ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ತಿಪ್ಪೇರುದ್ರಪ್ಪ ಅವರಿಗೆ ಒಬ್ಬನೇ ಮಗ ಪ್ರತಿವಾದಿರವರ ಗಂಡ ವೀರಭದ್ರಪ್ಪ ಇರುತ್ತಾನೆ ಎಂದರೆ ಸರಿ. ಸದರಿ ಪ್ರತಿವಾದಿ ಮತ್ತು ವೀರಭದ್ರಪ್ಪ ಅವರ ಮಗ ನಿಖಿಲ್ ಇರುತ್ತಾನೆ ಎಂದರೆ ಸರಿ. ತಿಪ್ಪೇರುದ್ರಪ್ಪ ಹಾಗೂ ವೀರಭದ್ರಪ್ಪ ಅವರ ಜೀವಿತ ಕಾಲದಲ್ಲಿ ಪಾಲುವಿಭಾಗ ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ವೀರಭದ್ರಪ್ಪ ಅವರು ಈಗ ಮೃತರಾಗಿರುತ್ತಾರೆ ಎಂದರೆ ಸರಿ. ವೀರಭದ್ರಪ್ಪ ಹಾಗೂ ತಿಪ್ಪೇರುದ್ರಪ್ಪ ಅವರು ಸಾಯುವ ಪೂರ್ವದಲ್ಲಿ ಪ್ರತಿವಾದಿಯೊಂದಿಗೆ ವಾಸ ಮಾಡಿಕೊಂಡಿದ್ದರು ಎಂದರ ಸಾಕ್ಷಿ ತಿಪ್ಪೇರುದ್ರಪ್ಪ ಅವರು ನನ್ನ ಜೋತೆ ವಾಸ ಮಾಡಿಕೊಂಡಿದ್ದರು ಎಂದು ಹೇಳುತ್ತಾರೆ . ವೀರಭದ್ರಪ್ಪ ಅವರು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ನನಗೆ ಗೋತಿಲ್ಲ . ವೀರಭದ್ರಪ್ಪ ಅವರು ಸದರಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡು ಅವರ ತಂದೆ ತಿಪ್ಪೇರುದ್ರಪ್ಪ ಅವರನ್ನು ನೋಡಿಕೊಳ್ಳುವ ಜವಬ್ದಾರಿ ಇತ್ತು ಎಂದರೆ ಸರಿಯಲ್ಲ. ವೀರಭದ್ರಪ್ಪ ಅವರು ತಾವು ದುಡಿದ ಹಣದಿಂದ ತಿಪ್ಪೇರುದ್ರಪ್ಪ ಮತತು ಅವರ ಕುಟುಂಬವನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ತಿಪ್ಪೇರುದ್ರಪ್ಪ ಅವರು ಮರಣದ ಪೂರ್ವದಲ್ಲ್ಲಿ ನನ್ನೊಂದಿಗೆ ವಾಸವಾಗಿದ್ದ ಬಗ್ಗೆ ತೋರಿಸಲು ನನ್ನ ಬಳಿ ಆಹಾರ ಪಡಿತರ ಚೀಟಿ

ಮತ್ತು ಚುನಾವಣಾ ಗುರುತಿನ ಚೀಟಿ ಇರುತ್ತದೆ ನಾನು ಅವುಗಳನ್ನು ಹಾಜರುಪಡಿಸುತ್ತೇನೆ . ತಿಪ್ಪೇರುದ್ರಪ್ಪ ಅವರ ಪತ್ನಿ ವೀರಭಸಮ್ಮ ಅವರು ಸನ್ 1992 ರಲ್ಲಿ ಮರಣಹೊಂದಿರುತ್ತಾರೆ . ಸದರಿ ವೀರಭಸಮ್ಮ ಅವರು ಮರಣಹೊಂದಿದಾಗ ಅವರ ಅಂತ್ಯಕ್ರಿಯೆಯನು ಮಗನಾದ ವೀರಭದ್ರಪ್ಪ ಅವರು ನೇರವೇರಿಸಿರುತ್ತಾರ ಎಂದರೆ ಸಾಕ್ಷಿ ವೀರಭದ್ರಪ್ಪ ಮತ್ತು ತಿಪ್ಪೇರುದ್ರಪ್ಪ ಇಬ್ಬರು ನೇರವೇರಿಸಿರುತ್ತಾರೆ ಎಂದು ಹೇಳುತ್ತಾರೆ . ವೀರಭದ್ರಪ್ಪ ಅವರು ಸನ್ 2019 ರಲ್ಲಿ ಮರಣಹೊಂದಿರುತ್ತಾರೆ ಎಂದರೆ ಸರಿ. ವೀರಭದ್ರಪ್ಪ ಅವರು ತಮ್ಮ ಪತ್ನಿ ಪ್ರತಿವಾದಿ ಮತ್ತು ಮಗನೊಂದಿಗೆ ವಾಸ ಮಾಡಿಕೊಂಡಿದ್ದು , ಅಲ್ಲೇ ಮರಣಹೊಂದಿರುತ್ತಾರೆ ಎಂದರೆ ಸರಿ. ವೀರಭದ್ರಪ್ಪ ಅವರ ಮರಣಾ ನಂತರ ವಿಧಿವಿಧಾನಗಳನು ಅವರ ದಾವಾ ಆಸ್ತಿ ಐಟಂ ನಂಬರ್ 1 ರಲ್ಲಿ ಮಾಡಿರುತ್ತಾರೆ ಎಂದರೆ ಸರಿ . ವೀರಭದ್ರಪ್ಪ ಅವರು ಮರಣಹೊಂದುವ ವರೆಗೂ ಸಹ ಅವರ ಒಟ್ಟು ಕುಟುಂಬದ ಆಸ್ತಿಗಳಲ್ಲಿ ಯಾವುದೇ ಪಾಲುವಿಭಾಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ತಿಪ್ಪೇರುದ್ರಪ್ಪ ಅವರ ತನ್ನ ಮಗ ವೀರಭದ್ರಪ್ಪ ಅವರ ಮರಣಹೊಂದಿದ ಕಾರಣ ಅವರಿಗೆ ಆರಾಮ ಇಲ್ಲದೇ ಹಾಸಿಗೆ ಹಿಡಿದಿರುತ್ತಾರೆ ಎಂದರೆ ಸರಿಯಲ್ಲ. ಈ ವಿಚಾರ ನನಗೆ ಗೋತ್ತಿದ್ದರು ಸಹ ಸುಳ್ಳು ಸಾಕ್ಷ್ಯ ಹೇಳುತ್ತಿದ್ದನೇ ಎಂದರೆ ಸರಿಯಲ್ಲ. ತಿಪ್ಪೇರುದ್ರಪ್ಪ ಅವರು ಆರೋಗ್ಯವಾಗಿ ಇರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ . ತಿಪ್ಪೇರುದ್ರಪ್ಪ ಅವರು ತಮಗೆ ಕಣ್ಣು ಕಾಣದೇ ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ಈ ವಿಚಾರ ನನಗೆ ತಿಳಿದಿದ್ದರು ಸಹ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ: 12.04.2019 ರಂದು ತಿಪ್ಪೇರುದ್ರಪ್ಪರವರು ಎಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಅವರು ಮೂಡಲ ಮಾಚಿಕೆರೆ ತಮ್ಮ ಮನೆಯಲ್ಲಿ ವಾಸವಿದ್ದರು , ನಂತರ ನನಗೆ ವಿಲ್ ಮಾಡಿಸುವುದಾಗಿ ಭೀಮಪ್ಪ ರವರಿಗೆ ಪೋನ್ ಮೂಲಕ ಮಾಹಿತಿ ತಿಳಿಸಿರುತ್ತಾರೆ . ಸದರಿ ಭೀಮಪ್ಪ ಅವರಿಗೆ ತಿಪ್ಪೇರುದ್ರಪ್ಪ ಅವರು ಯಾವ ದಿನಾಂಕ ಪೋನ್ ಮಾಡಿರುತ್ತಾರೆ ನನಗೆ ಗೋತ್ತಿಲ್ಲ . ನಾನು ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 11 ವಿಲ್ ಪತ್ರದಲ್ಲಿ ತಿಪ್ಪೇರುದ್ರಪ್ಪ ಅವರ ವಾಸ ಜಗಳೂರು ಟೌನ್ ಪೋಸ್ಟ್ ಅಫೀಸ್ ರಸ್ತೆ 2 ನೇ ಕ್ರಾಸ್ ಜೆ ಸಿ ಆರ್ ಬಡಾವಣೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ತಿಪ್ಪೇರುದ್ರಪ್ಪ

ಅವರ ಆಧಾರ್ ಕಾರ್ಡ್ ನಲ್ಲಿ ನಮೂದಿರುವ ವಿಳಾಸ ನಮೂದು ಇರುತ್ತದೆ ಎಂದು ಹೇಳುತ್ತಾರೆ . ನಿಪಿ 11 ಕ್ಕೆ ನಮೂದಿರುವ ಮರಣ ಶಾಸನದ ವಿಲ್ ಪತ್ರಕ್ಕೆ ನಾನೇ ನೀಡಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ತಿಪ್ಪೇರುದ್ರಪ್ಪ ಅವರ ಆಧಾರ್ ಕಾರ್ಡ್ ಅನ್ನು ತಯಾರು ಮಾಡಲು ನೀಡಿರುತ್ತೇನೆ ಎಂದು ಹೇಳುತ್ತಾರೆ . ತಿಪ್ಪೇರುದ್ರಪ್ಪ ಅವರಿಗೆ 80 ವರ್ಷ ಆಗಿದ್ದು , ಕಣ್ಣು ಕಾಣುತ್ತಿರಲಿಲ್ಲ ಅವರನ್ನು ನಾನೇ ಜಗಳೂರು ಉಪನೊಂದಾಣಿ ಅಧಿಕಾರಿ ಕಛೇರಿಗೆ ಕರೆದುಕೊಂಡು ಹೋಗಿ ನಿಪಿ 11 ಮರಣ ಶಾಸನ ಪತ್ರವನ್ನು ತಯಾರಿಸುತ್ತೇನೆ ಎಂದರೆ ಗೊತ್ತಿಲ್ಲ . ನಾನು ಮತ್ತು ಪಿ ಡಬ್ಲು2 ಮತ್ತು 3 ಸಾಕ್ಷಿಗಳನ್ನು ಕರೆದುಕೊಂಡು ಹೋಗಿ ನಿಪಿ 11 ದಾಖಲೆ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ತಿಪ್ಪೇರುದ್ರಪ್ಪ ಅವರಿಗೆ ನಿಪಿ 11 ವಿಲ್ ಅನ್ನು ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸಾಕ್ಷಿ ನಾನು ತಿಪ್ಪೇರುದ್ರಪ್ಪ ಅವರನ್ನು ನೋಡಿಕೊಳ್ಳುತ್ತಿದ್ದೇ ಆದ ಕಾರಣ ಮಾಡಿರುತ್ತಾರೆ ಎಂದು ಹೇಳುತ್ತಾರೆ . ನಾನು ಎಂದಿಗೂ ತಿಪ್ಪೇರುದ್ರಪ್ಪ ಅವರನ್ನು ನೋಡಿ ಕೊಂಡಿರುವುದಿಲ್ಲ , ನಾನು ನಿಪಿ 11 ವಿಲ್ ಅನ್ನು ಸೃಷ್ಠಿ ಮಾಡಲು ಈ ರೀತಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ತಿಪ್ಪೇರುದ್ರಪ್ಪ ಅವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸಾಕ್ಷಿ ತಿಪ್ಪೇರುದ್ರಪ್ಪ ಅವರ ಭಾಗಕ್ಕೆ ಬಂದಂತ ಆಸ್ತಿಗಳನ್ನು ನಿಪಿ 11 ಮೂಲಕ ನೀಡಿರುತ್ತಾರೆ ಎಂದು ಹೇಳುತ್ತಾರೆ . ತಿಪ್ಪೇರುದ್ರಪ್ಪ ಅವರಿಗೆ ಯಾವಾಗ ದಾವಾ ಆಸ್ತಿಗಳು ಭಾಗಕ್ಕೆ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ . ಈ ದಾವೆ ಸಲ್ಲಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ . ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಿಪಿ 11 ವಿಲ್ ದಾಖಲೆಯು ನಾನು ಸೃಷ್ಠಿ ಮಾಡಿಕೊಂಡ ಕಾರಣ ಈ ನ್ಯಾಯಾಲಯದಿಂದ ನಾನು ಪರಿಹಾರ ಪಡೆಯಲು ಅರ್ಹ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನ ಇರುವುದಿಲ್ಲ ಪ್ರತಿವಾದಿ ಮಾತ್ರ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಎಂದಿಗೂ ದಾವಾ ಆಸ್ತಿಯಲ್ಲಿ ಸ್ವಾಧೀನ ಇರುವುದಿಲ್ಲ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಅಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು